ಕ್ರ. ಸಂ.	ವರ್ಷ		ಗ್ರಾಮದ ಹೆಸರು	ಮಂಜೂರು ಮಾಡಿದ ಮೊತ್ತ	ಸಂಸ್ಥೆಗಳು
		5.	ಹಳದೂರ	18,000.00	1
		6.	ತಳ್ಳೀಕೇರಿ	25,000.00	1
		7.	ಕಮತಗಿ	18,000.00	1
		8.	ಕಮತಗಿ	18,000.00	1
		9.	ಅಮೀನಗಡಿ	18,000.00	1
			ಒಟ್ಟು	1,98,000.00	10
5.	1995-96	1.	ಅಮೀನಗಡ	15,000.00	5

ವಿಷಯ:- ಶಿಗ್ಗಾಂವ್ ಬಸ್ ನಿಲ್ದಾಣದ ಕಟ್ಟಡ.

40(109)

ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಶಿಗ್ಗಾಂವ್ ಬಸ್ ನಿಲ್ದಾಣ ಕಟ್ಟಡ ಕಟ್ಟಲು ಯಾರಿಗೆ ಗುತ್ತಿಗೆ ನೀಡಲಾಗಿದೆ;

ಆ) ಈ ಕಾಮಗಾರಿಯನ್ನು ಎಷ್ಟು ದಿವಸಗಳಲ್ಲಿ ಮುಗಿಸಲಾಗುವುದು ಅದಕ್ಕೆ ತಗಲುವ ವೆಚ್ಚವೆಷ್ಟು;

ಇ) ಈ ಬಸ್ ಸ್ಟ್ಯಾಂಡ್ ಕಟ್ಟಡದ ಕೆಲಸ ವಿಳಂಬವಾಗಲು ಕಾರಣವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) ಶಿಗ್ಗಾಂವ್ ಬಸ್ ನಿಲ್ದಾಣ ಕಟ್ಟಡ ನಿರ್ಮಾಣ ಕೆಲಸವನ್ನು ಶ್ರೀ ಎಂ.ಎಂ. ಮುನಿಶಿ, ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್, ಬಿಜಾಪುರ ಇವರಿಗೆ ಟೆಂಡರ್ ಮುಖಾಂತರ ವಹಿಸಲಾಗಿದೆ.

ಆ) ಸದರಿ ಕಾಮಗಾರಿಯನ್ನು ನಿಗದಿತ ಕಾಲಮಿತಿಯಾದ ಡಿಸೆಂಬರ್ 1997 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಕಾಮಗಾರಿಗೆ ಸುಮಾರು 30.32 ಲಕ್ಷಗಳಷ್ಟು ವೆಚ್ಚವಾಹಬಹುದೆಂದು ಅಂದಾಜಿಸಲಾಗಿದೆ.

ಇ) ಕಂದಾಯ ಇಲಾಖೆಯವರು ನಿವೇಶನದ ಬೌಂಡರಿಗಳನ್ನು ಗುರುತಿಸುವಲ್ಲಿ ಹಾಗೂ ನಿವೇಶನದಲ್ಲಿ ಸಡಿಲಮಣ್ಣು ದೊರೆತ ಕಾರಣ ಸೂಕ್ತ ಅಡಿಪಾಯವನ್ನು ನಿರ್ಧರಿಸಲು ತಜ್ಞರಿಂದ ಸಲಹೆ ಪಡೆಯುವಲ್ಲಿ ವಿಳಂಬವಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.